# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

# 51ನೇ ವಿದ್ಯಾವಿಷಯಕ್ ಪರಿಷತ್ತಿನ ಸಾಮಾನ್ಯ ಸಭೆ ಹಾಗೂ 2025ನೇ ಸಾಲಿನ 3ನೇ ಸಭೆಯ ನಡಾವಳಿಗಳು

ದಿನಾಂಕ : ಶುಕ್ರವಾರ, 06–06–2025

ಸಮಯ : ಪೂರ್ವಾಹ್ನ 11 : 00 ಘಂಟೆ

ಸ್ಥಳ : ಕುವೆಂಪು ಸಭಾಂಗಣ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಪರಿಷತ್ತಿನ **51ನೇ** ಸಾಮಾನ್ಯ ಸಭೆಯ ಹಾಗೂ **2025ನೇ** ಸಾಲಿನ **3ನೇ ಸಭೆಯು** ದಿನಾಂಕ **06 ಜೂನ್ 2025** ರಂದು **ಪೂರ್ವಾಹ್ನ 11.00** ಘಂಟೆಗೆ ಹಾಜರಿದ್ದ/ಹಾಜರಾಗದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | |
|---|---|
| 1. **ಪ್ರೊ. ಸಿ. ಎಂ. ತ್ಯಾಗರಾಜ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. ಡಾ.(ಶ್ರೀಮತಿ) ನಿರ್ಮಲಾ ಜಿ. ಭಟ್ಟಲ | ಸದಸ್ಯರು |
| 3. ಶ್ರೀ ಶಿವಕುಮಾರ ವ್ಹಿ. ಪರಾಂಡೆ | ಸದಸ್ಯರು |
| 4. ಶ್ರೀ ಆರ್. ಎಂ. ದೇವರೆಡ್ಡಿ | ಸದಸ್ಯರು |
| 5. ಶ್ರೀ ಜಗದೀಶ ಜೋಡಂಗಿ | ಸದಸ್ಯರು |
| 6. ಶ್ರೀ ಎಸ್. ಎ. ದೇಶಮುಖ | ಸದಸ್ಯರು |
| 7. ಶ್ರೀ ವಿಲಾಸ ಎನ್ ಕಾಂಬಳೆ | ಸದಸ್ಯರು |
| 8. ಪ್ರೊ. ಎಸ್. ಎಂ. ಸಜ್ಜನ | ಸದಸ್ಯರು |
| 9. ಶ್ರೀ ಲಕ್ಷ್ಮಣ ಎಸ್ ಬಡಿಗೇರ | ಸದಸ್ಯರು |
| 10. ಶ್ರೀ ಜಿ. ಎಚ್. ಮಣ್ಣೂರ | ಸದಸ್ಯರು |
| 11. ಪ್ರೊ. ಕಾಂತರಾಜು ಕಾಮಣ್ಣ | ಸದಸ್ಯರು |
| 12. ಪ್ರೊ. ಶಿವಾನಂದ ಗೋರನಾಳೆ | ಸದಸ್ಯರು |
| 13. ಪ್ರೊ. ಬಿ. ಎಸ್. ನಾವಿ | ಸದಸ್ಯರು |
| 14. ಪ್ರೊ. ಎಸ್. ಬಿ. ಆಕಾಶ | ಸದಸ್ಯರು |
| 15. ಪ್ರೊ. ಡಿ. ಎನ್. ಪಾಟೀಲ್ | ಸದಸ್ಯರು |
| 16. ಪ್ರೊ. ವ್ಹಿ. ಎಂ. ಬಂಕಾಪೂರ, | ಸದಸ್ಯರು |
| 17. ಡಾ. ಸುಷ್ಮಾ.ಆರ್. | ಸದಸ್ಯರು |
| 18. ಪ್ರೊ. ವ್ಹಿ. ಎಂ. ಬಂಕಾಪೂರ, **(ಗ್ರಂಥಪಾಲಕರು)** | ಸದಸ್ಯರು |
| 19. ಪ್ರೊ. ವಾಯ್. ಎಸ್. ಬಲವಂತಗೋಳ **(ವಿದ್ಯಾರ್ಥಿ ಕಲ್ಯಾಣ)** | ಸದಸ್ಯರು |
| 20. ಪ್ರೊ. ವಿಶ್ವನಾಥ ಅವಟಿ, **(ನಿರ್ದೇಶಕರು, (ಯೋ.ಮೇ.ಮೌ ಮಂಡಳಿ)** | ಸದಸ್ಯರು |
| 21. ಶ್ರೀ ಎಂ.ಎ. ಸಪ್ನ **(ಹಣಕಾಸು ಅಧಿಕಾರಿಗಳು)** | ಸದಸ್ಯರು |
| 22. ಶ್ರೀ ರವೀಂದ್ರನಾಥ ಕದಮ್, **(ಕುಲಸಚಿವರು(ಮೌಲ್ಯಮಾಪನ)** | ಸದಸ್ಯರು |
| 23. ಸಂತೋಷ ಕಾಮಗೌಡ ಕೆ.ಎ.ಎಸ್. | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು

| | |
|---|---|
| 1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ | ಸದಸ್ಯರು |
| 3. ಶ್ರೀ ಗಣೇಶ ಪ್ರಕಾಶ ಹುಕ್ಕೇರಿ, ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 4. ಶ್ರೀ ಬಿ.ಬಿ. ಚಿಮ್ಮನಕಟ್ಟಿ, ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 5. ಶ್ರೀ ಅಶೋಕ ಮಲ್ಲಪ್ಪ ಮನಗೂಳಿ, ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 6. ಶ್ರೀ. ಪ್ರದೀಪ ಶೆಟ್ಟರ್, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 7. ಡಾ. ತಳವಾರ್ ಸಾಬಣ್ಣ, ವಿಧಾನ ಪರಿಷತ್ತಿನ ಶಾಸಕರು | ಸದಸ್ಯರು |
| 8. ಶ್ರೀಮತಿ ಎಸ್. ಬಿ. ಢಂಗ | ಸದಸ್ಯರು |
| 9. ಪ್ರೊ. ಆರ್. ಎನ್. ಮನಗೂಳಿ | ಸದಸ್ಯರು |
| 10. ಪ್ರೊ. ಅಶೋಕ ಡಿ' ಸೋಜಾ | ಸದಸ್ಯರು |
| 11. ಪ್ರೊ. ಅಶೋಕ ಡಿ' ಸೋಜಾ **(ನಿರ್ದೇಶಕರು, ಸಿ.ಡಿ.ಸಿ. ವಿಭಾಗ)** | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು-ಪೂನಾ ರಾ.ಹೆ.-4, ಬೆಳಗಾವಿ-591156

## ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ **06 ಜೂನ್ 2025** ರಂದು ಕುವೆಂಪು ಸಭಾಂಗಣ, ರಾಚವಿವಿ, ಬೆಳಗಾವಿಯಲ್ಲಿ ಜರುಗಿದ ವಿಶ್ವವಿದ್ಯಾಲಯದ **51ನೇ ಹಾಗೂ 2025ನೇ ಸಾಲಿನ 3ನೇ** ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (30)(2) ಮತ್ತು 31.
2. ಮಾನ್ಯ ಕುಲಪತಿಗಳ ಸಭೆ ನಡೆಸಲು ನೀಡಿದ ಅನುಮೋದನೆ ದಿನಾಂಕ: 08.05.2025.
3. ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 09.05.2025.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ (30)(2)(31)ರ ಅನುಗುಣವಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 51ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸಭೆಯನ್ನು ದಿನಾಂಕ: 06.06.2025 ರಂದು ಪೂರ್ವಾಹ್ನ 11.00 ಘಂಟೆಗೆ ಕುವೆಂಪು ಸಭಾಂಗಣ, ರಾಚವಿ, ಬೆಳಗಾವಿ ಇಲ್ಲಿ ಆಯೋಜನೆ ಮಾಡಲಾಗಿತ್ತು. ಹೊಸದಾಗಿ ಡೀನರಾಗಿ ನೇಮಕಗೊಂಡಿರುವ ಪ್ರೊ. ವಿನಾಯಕ ಬಂಕಾಪೂರ, ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಹಾಗೂ ಡಾ. ಸುಷ್ಮಾ. ಆರ್, ಸಹ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಇವರುಗಳಿಗೆ ಹೂಗುಚ್ಛವನ್ನು ನೀಡುವುದರ ಮೂಲಕ ಸಭೆಗೆ ಬರಮಾಡಿಕೊಳ್ಳಲಾಯಿತು ನಂತರ, ಸಭೆಯ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ಕಳೆದ ವಿದ್ಯಾವಿಷಯಕ್ ಪರಿಷತ್‌ನಿಂದ ಈ ವಿದ್ಯಾವಿಷಯಕ್ ಪರಿಷತ್‌ವರೆಗೆ ಯುಜಿಸಿ, ಕೇಂದ್ರ, ರಾಜ್ಯ ಸರ್ಕಾರಗಳಿಂದ ಯಾವುದೇ ನೀತಿ-ನಿರೂಪಣೆ ಪತ್ರಗಳು ಬಂದಿರುವುದಿಲ್ಲ. ವಿದ್ಯಾವಿಷಯಕ್ ಪರಿಷತ್ತು ವಿಶ್ವವಿದ್ಯಾಲಯದಲ್ಲಿ ಇರತಕ್ಕಂಹ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಕುರಿತಾಗಿ ಸಮಗ್ರವಾಗಿ ಚರ್ಚೆ ಮಾಡಿ Outcome Base Education ನೀಡಲು ಹೆಚ್ಚಿನ ಆದ್ಯತೆ ನೀಡಬೇಕು. ಇದು ನವೀಕೃತ ಪಠ್ಯಕ್ರಮವನ್ನು ಅಳವಡಿಸುವುದರ ಮೂಲಕ ಮಾತ್ರ ಸಾಧ್ಯ. ದೇಶದ ಹೆಸರಾಂತ ಸಂಸ್ಥೆಗಳಾದ Indian Institute of Science, IIT, IIM, ಗಳಲ್ಲಿ ವಿದ್ಯಾಭ್ಯಾಸ ಕೈಗೊಂಡ ಹೆಚ್ಚಿನ ವಿದ್ಯಾರ್ಥಿಗಳಿಗೆ ಉದ್ಯೋಗಗಳು ಲಭ್ಯವಾಗುತ್ತವೆ. ಏಕೆಂದರೆ ಅಲ್ಲಿನ ಶಿಕ್ಷಣ ಸಂಸ್ಥೆಗಳು ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಾರೆ. ಭವಿಷ್ಯದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳು ಭಾರತದಲ್ಲಿ ನೆಲವುರಿದರೆ ನಮ್ಮ ವಿಶ್ವವಿದ್ಯಾಲಯಗಳ ಸ್ಪರ್ಧಾತ್ಮಕತೆ ಮತ್ತು ಶಿಕ್ಷಣದ ಗುಣಮಟ್ಟದ ಕೊರತೆಯಿಂದಾಗಿ ಪದವಿಗಳಿಗೆ ಬೆಲೆ ಇಲ್ಲದಂತಾಗುತ್ತದೆ. ವಿದೇಶ ವಿಶ್ವವಿದ್ಯಾಲಯಗಳ ಕೆಲಸ ಕಾರ್ಯಗಳ ವಿಧಾನ, ಶೈಕ್ಷಣಿಕ ವಿಧಾನ, Curriculum Teaching Method ಗುಣಾತ್ಮಕವಾಗಿರುವುದರಿಂದ Basic Subject Knowledge ನಿಂದ Advance Knowledge ಗೆ ಹೊಂದಿಕೊಳ್ಳುವುದು ಅತೀ ಅವಶ್ಯವಿರುತ್ತದೆ. ಈ ನಿಟ್ಟಿನಲ್ಲಿ ನಮ್ಮ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ Faculty Development Programme, ಸಮ್ಮೇಳನ, ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ. ಸ್ನಾತಕೋತ್ತರ ಪ್ರವೇಶಾತಿ ಪಡೆಯಲು ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪರೀಕ್ಷೆ ನಡೆಸಲು ಯೋಜಿಸಲಾಗಿದೆ ಎಂದರು.

ಮುಂದುವರೆದು, ಪ್ರೊ. ಕಾಂತರಾಜು ಕಾಮಣ್ಣ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಇವರಿಗೆ ಪಿಎಚ್.ಡಿ. ಪ್ರೊಜೆಕ್ಟ್‌ಗಾಗಿ 40 ಲಕ್ಷ ರೂಪಾಯಿಗಳ ಅನುದಾನ ಮಂಜೂರಾಗಿರುವುದು ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಎನ್.ಸಿ.ಸಿ. ಆರ್ಮಿ ಯುನಿಟ್ ಪ್ರಾರಂಭವಾಗಿರುವುದು ವಿಶ್ವವಿದ್ಯಾಲಯಕ್ಕೆ ಗೌರವ ಎಂದು ಕುಲಪತಿಗಳು ಹರ್ಷ ವ್ಯಕ್ತಪಡಿಸಿದರು.

ತದನಂತರ, ಕಿತ್ತೂರು ರಾಣಿ ಚನ್ನಮ್ಮ ಮೃಗಾಲಯ, ಭೂತರಾಮನಹಟ್ಟಿ ಇಲ್ಲಿಂದ ಕನಿಷ್ಕ ಎಂಬ ಹೆಸರಿನ ಹುಲಿಯನ್ನು ದತ್ತು ಪಡೆದಿದ್ದು ಇದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಕುಲಪತಿಗಳಿಗೆ ಹಸ್ತಾಂತರಿಸಿದ ನಂತರ ಕುಲಸಚಿವರು ವಿಷಯಸೂಚಿಗಳನ್ನು ಈ ಕೆಳಕಾಣಿಸಿದಂತೆ ಪ್ರಸ್ತಾಪಿಸಿದರು.

| ಕ್ರ.ಸಂ. | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 1 | 2025/06/01 | ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| ತೀರ್ಮಾನ | | ದಿನಾಂಕ: **27.03.2025** ರಂದು ನಡೆದ ವಿದ್ಯಾವಿಷಯಕ್ ಪರಿಷತ್ತಿನ ಸಾಮಾನ್ಯ ಸಭೆ ಹಾಗೂ ದಿನಾಂಕ: **10.04.2025** ರಂದು ನಡೆದ ವಿಶೇಷ ವಿದ್ಯಾವಿಷಯಕ್ ಪರಿಷತ್ತಿನ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| 2 | 2025/06/02 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಸ್ನಾತಕ ಕೋರ್ಸಗಳ ಪ್ರವೇಶ ಮಿತಿಗೆ ಅನುಸಮರ್ಥನೆ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ **2024-25** ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಬಿ.ಎ.-**320**, ಬಿ.ಕಾಂ-**320**, ಬಿ.ಎಸ್ಸಿ-**340**, ಬಿಬಿಎ-**120**, ಬಿಸಿಎ-**120** ಕೋರ್ಸಗಳಿಗೆ ಪ್ರವೇಶ ಮಿತಿ ನಿಗದಿಪಡಿಸಲಾಗಿದೆ. ಮುಂದುವರೆದು, ಪ್ರಸ್ತುತ, ಸದರಿ ಮಹಾವಿದ್ಯಾಲಯದ ಪ್ರಾಚಾರ್ಯರು ಬಿ.ಎ.-**250**, ಬಿ.ಕಾಂ-**250**, ಬಿ.ಎಸ್ಸಿ-**200**, ಬಿಬಿಎ-**80**, ಬಿಸಿಎ-**80** ಪ್ರವೇಶ ಮಿತಿಯನ್ನು ಕಡಿಮೆಗೊಳಿಸಿ ನಿಗದಿಪಡಿಸಲು ಮನವಿಯನ್ನು ಸಲ್ಲಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.<br>ಪ್ರಸ್ತುತ ಮಹಾವಿದ್ಯಾಲಯದಲ್ಲಿ ಬಿ.ಎ, ಬಿ.ಕಾಂ, ಬಿ..ಎಸ್ಸಿ.ಬಿ.ಬಿ.ಎ. ಬಿ.ಸಿ.ಎ. ಎಂ.ಕಾಂ ವಿವಿಧ ಕೋರ್ಸ್‌ಗಳು ಚಾಲ್ತಿಯಲ್ಲಿ ಇರುತ್ತವೆ. ಪ್ರತಿ ಶೈಕ್ಷಣಿಕ ವರ್ಷ ಪ್ರವೇಶಾತಿ ಪೂರ್ಣ ಪ್ರಮಾಣದಲ್ಲಿ ಆಗುತ್ತಿದೆ. ಆದರೆ ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿಗಳ ಕೊರತೆ ಇರುವುದರಿಂದ ಎಲ್ಲ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಪ್ರವೇಶಾತಿ ಮಿತಿ ಕಡಿಮೆಗೊಳಿಸಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಉತ್ತಮ ಮಟ್ಟದ ಶಿಕ್ಷಣ ನೀಡುವ ದೃಷ್ಟಿಯಿಂದ ಪ್ರಾಚಾರ್ಯರ ಮನವಿಯನ್ನು ಪರಿಶೀಲಿಸಿ ಕ್ರಮವಹಿಸಲು ಸಭೆಯು ಸಹಮತಿ ವ್ಯಕ್ತಪಡಿಸಿತು. |
| 3 | 2025/06/03 | ಶ್ರೀ ಬಸವರಾಜ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ ಇವರ 2024-25ನೇ ಸಾಲಿನ ಪ್ರವೇಶಾತಿ ಹಾಗೂ NCTE ಯಿಂದ Final Showcause Notice ಬಂದಿರುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಶ್ರೀ ಬಸವರಾಜ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ ಇವರು **2023-24** ಮತ್ತು **2024-25**ನೇ ಸಾಲಿನ NCTE ಯಿಂದ ಸಂಯೋಜನೆ ಮುಂದುವರಿಕೆಯ ಆದೇಶ ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ನೀಡಿರುವುದಿಲ್ಲ. ಈ ಕುರಿತಾಗಿ ಪರಿಶೀಲಿಸಲು ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ನೀಡಿದ ವರದಿಯನ್ನು ಸಭೆಗೆ ಪ್ರಸ್ತುತ ಪಡಿಸಲಾಯಿತು. ವರದಿಯನ್ನು ಪರಿಶೀಲಿಸಿದ ಸಭೆಯು NCTE Continuation Order ಪ್ರತಿಯನ್ನು ಶೀಘ್ರದಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಮಹಾವಿದ್ಯಾಲಯದವರಿಗೆ ಅಂತಿಮ ನೋಟಿಸ್ ಜಾರಿ ಮಾಡಲು ಸಭೆಯು ತೀರ್ಮಾನಿಸಿತು. |
| 4 | 2025/06/04 | 2025-26 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿಯ ಪೂರ್ವ ಸಿದ್ಧತೆ ಹಾಗೂ ಪ್ರವೇಶ ಪ್ರಕ್ರಿಯೆಗಳಿಗೆ ಸಭೆಯ ಅನುಮೋದನೆ ಕುರಿತು. |
| ತೀರ್ಮಾನ | | **1.** ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಪದವಿಗಳ **6**ನೇ ಸೆಮಿಸ್ಟರ್‌ನ ಪರೀಕ್ಷೆಗಳು **2025**ರ ಮೇ ತಿಂಗಳಲ್ಲಿ ಪ್ರಾರಂಭವಾಗಿ ಜೂನ್ ತಿಂಗಳಲ್ಲಿ ಮುಕ್ತಾಯಗೊಳ್ಳಲಿವೆ ಹಾಗೂ ಜುಲೈ-**2025** ತಿಂಗಳಲ್ಲಿ ಫಲಿತಾಂಶಗಳು ಪ್ರಕಟವಾಗುವ ಸಂಭವವಿರುವುದರಿಂದ ಈ ಕೆಳಕಾಣಿಸಿದಂತೆ ಸ್ನಾತಕೋತ್ತರ ಪ್ರವೇಶಾತಿ ಪ್ರಕ್ರಿಯೆ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು. |

| ಸಂ | ವಿಷಯ | ವರ್ಷ ಮತ್ತು ತಿಂಗಳು |
|---|---|---|
| 1 | ಸ್ನಾತಕೋತ್ತರ ಪ್ರವೇಶಾತಿ ಅಧಿಸೂಚನೆ ಪ್ರಕಟಣೆ | 2025–ಜೂನ್ 3ನೇ ವಾರ |
| 2 | ಪ್ರವೇಶಾತಿ ಪ್ರಾರಂಭ ಮತ್ತು ಮುಕ್ತಾಯ | 2025– ಜುಲೈ ತಿಂಗಳು |
| 3 | ತರಗತಿಗಳ ಪ್ರಾರಂಭ | 2025–ಆಗಸ್ಟ್ ಮೊದಲನೇ ವಾರ |

2. **2024–25ನೇ** ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಮತ್ತು ಬಿ.ಎಡ್/ಬಿ.ಪಿಎಡ್ ಕೋರ್ಸಗಳಿಗೆ ಏಕರೂಪ ಶುಲ್ಕಗಳಿಗೆ ಶೇಕಡಾ **10** ರಷ್ಟು ಹೆಚ್ಚಿಸಿ ಪ್ರವೇಶಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು. ಸದರಿ ಶುಲ್ಕಗಳಿಗೆ **2025–26**ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕೋತ್ತರ ಮತ್ತು ಬಿ.ಎಡ್/ಬಿ.ಪಿಎಡ್ ವಿದ್ಯಾರ್ಥಿಗಳಿಗೆ ಶೇಕಡಾ **10** ರಷ್ಟು ಶುಲ್ಕಗಳನ್ನು ಹೆಚ್ಚಿಸಲು ಸಭೆಯು ಅನುಮೋದನೆ ನೀಡಿತು.
3. **2024–25** ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅಳವಡಿಸಿಕೊಂಡಿರುವ ಪ್ರವೇಶಾತಿ ಶುಲ್ಕಗಳನ್ನು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಮುಂದುವರೆಸಲು ಸಭೆಯು ಅನುಮೋದನೆ ನೀಡಿತು.
4. **2024–25** ನೇ ಶೈಕ್ಷಣಿಕ ಸಾಲಿನಲ್ಲಿ ಕೇವಲ ಮರಾಠಿ ವಿಭಾಗಕ್ಕೆ ರೂ. **5005/–**ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಲಾಗಿತ್ತು. ಸದರಿ ಶುಲ್ಕಗಳನ್ನು **2025–26**ನೇ ಶೈಕ್ಷಣಿಕ ಸಾಲಿಗೆ ಮುಂದುವರೆಸಲು ಸಭೆಯು ಅನುಮೋದನೆ ನೀಡಿತು.
5. **2023–24, 2024–25** ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಫ್ರೀಶಿಪ್ ಕಾರ್ಡ ಮೂಲಕ ಪ್ರವೇಶ ಪಡೆದುಕೊಂಡ ಹಾಗೂ ಮಧ್ಯದಲ್ಲಿ ಅಧ್ಯಯನ ಮೊಟಕಗೊಳಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಅಂಕಿ–ಅಂಶಗಳ ಪಟ್ಟಿಯನ್ನು ಸಭೆಯ ಗಮನಕ್ಕೆ ತರಲಾಯಿತು. ಕನ್ನಡ, ರಾಜ್ಯಶಾಸ್ತ್ರ, ಶಿಕ್ಷಣ ಮತ್ತು ಪತ್ರಿಕೋದ್ಯಮ ವಿಭಾಗಗಳ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದು ಅರ್ಧದಲ್ಲಿ ಮೊಟಕುಗೊಳಿಸಿರುವುದರಿಂದ **2025–26** ನೇ ಶೈಕ್ಷಣಿಕ ಸಾಲಿನಿಂದ ಸದರಿ ವಿಭಾಗಗಳ ಫ್ರೀಶೀಪ್ ಕಾರ್ಡ ಪ್ರವೇಶಾತಿಯನ್ನು ರದ್ದುಪಡಿಸಲು ಸಭೆಯು ತೀರ್ಮಾನಿಸಿತು.
6. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ **01** ಸೆಹಿಮ **2022**, ದಿನಾಂಕ: **28.12.2022** ಅನುಬಂಧರಲ್ಲಿ ಸೂಚಿಸಿರುವ ರೋಸ್ಟರ್ ಪಟ್ಟಿಯಂತೆ, ಸ್ನಾತಕೋತ್ತರ ವಿಭಾಗ ಹಾಗೂ ಮಹಾವಿದ್ಯಾಲಯಗಳ ಪ್ರವೇಶ ಮಿತಿಯನುಸಾರ ಸೀಟು ಹಂಚಿಕೆ ಪಟ್ಟಿಯನ್ನು ಸಿದ್ಧಪಡಿಸಿ, ಪ್ರವೇಶಾತಿ(PG Counselling) ಪ್ರಕ್ರಿಯೆಯನ್ನು ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.
7. **2025–26**ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಂದ ಪರಿಶೀಲಿಸಿ ದೃಢೀಕರಿಸಿಕೊಂಡ ಸ್ನಾತಕೋತ್ತರ ಪ್ರವೇಶಾತಿ ಅರ್ಹತಾ ಮಾನದಂಡಗಳು ಹಾಗೂ ಪ್ರವೇಶ ಮಿತಿಗಳಿಗೆ ಸಭೆಯು ಅನುಮೋದನೆ ನೀಡಿತು.

| | | |
|---|---|---|
| 5 | 2025/06/05 | 2025–26 ನೇ ಶೈಕ್ಷಣಿಕ ಸಾಲಿನ ಸ್ನಾತಕ ವಿಭಾಗದ ಪಠ್ಯಕ್ರಮಗಳಿಗೆ ಅನುಮೋದನೆ ನೀಡುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2025–26ನೇ ಶೈಕ್ಷಣಿಕ ಸಾಲಿನ ಸ್ನಾತಕ ವಿಭಾಗಗಳ ಪಠ್ಯಕ್ರಮಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು. |
| 6 | 2025/06/06 | ಕೆ.ಎಲ್.ಇ ಸಂಸ್ಥೆಯ ಲಿಂಗರಾಜ ಸ್ವಾಯತ್ತ ಮಹಾವಿದ್ಯಾಲಯದಲ್ಲಿ BFAD, BCA, & MBA ಹೊಸ ಕೋರ್ಸಗಳನ್ನು ಪ್ರಾರಂಭಿಸಲು ವಿನಂತಿಸಿರುವ ಕುರಿತು. |
| ತೀರ್ಮಾನ | | ಕೆ.ಎಲ್.ಇ ಸಂಸ್ಥೆಯ ಲಿಂಗರಾಜ ಸ್ವಾಯತ್ತ ಮಹಾವಿದ್ಯಾಲಯದ ಪ್ರಾಚಾರ್ಯರು 2025–26ನೇ ಶೈಕ್ಷಣಿಕ ಸಾಲಿಗೆ BFAD, BCA, & MBA ಹೊಸ ಕೋರ್ಸಗಳನ್ನು ಪ್ರಾರಂಭಿಸಲು ಮನವಿ ಸಲ್ಲಿಸಿರುತ್ತಾರೆ. ಸದರಿ ಮಹಾವಿದ್ಯಾಲಯದವರು ಕೋರ್ಸಗಳನ್ನು ಪ್ರಾರಂಭಿಸಲು ಮಾತ್ರ All India Council for Technical Education ನಿಂದ ಅನುಮತಿ ಪಡೆದುಕೊಂಡಿರುತ್ತಾರೆ. ಕಾರಣ, ಕೆ.ಎಲ್.ಇ ಸಂಸ್ಥೆಯ ಲಿಂಗರಾಜ ಸ್ವಾಯತ್ತ ಮಹಾವಿದ್ಯಾಲಯದಲ್ಲಿ 2025–26 ನೇ ಶೈಕ್ಷಣಿಕ ಸಾಲಿಗೆ BCA, & MBA ಹೊಸ ಕೋರ್ಸಗಳನ್ನು ಮಾತ್ರ ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು. |

| | | |
|---|---|---|
| 07 | 2025/06/07 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಹೊಸದಾಗಿ AI Lab ವನ್ನು ಸ್ಥಾಪಿಸಲು ಅನುಮತಿ ನೀಡುವ ಕುರಿತು. |
| ತೀರ್ಮಾನ | | ಪ್ರಚಲಿತ ಕಾಲಘಟ್ಟದಲ್ಲಿ ಶಿಕ್ಷಣದ ಪರಿಕ್ರಮ ಬದಲಾಗುತ್ತಿದೆ. ಅದರಲ್ಲೂ ಇಂದಿನ ಎಐ(AI) ಯುಗದಲ್ಲಿ ಹೊಸ ವಿಷಯಗಳನ್ನು ಕಲಿಯುವುದು ಕೌಶಲ್ಯ ಅಭಿವೃದ್ಧಿಪಡಿಸಿಕೊಳ್ಳಲೇಬೇಕಾಗಿದೆ. ಕಾರಣ, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗಾಗಿ AI Lab ನ್ನು ಸ್ಥಾಪಿಸುವುದು ಅವಶ್ಯವಿರುತ್ತದೆ. ಇದರಿಂದ ಅತೀ ವೇಗದಲ್ಲಿ ಮಾಹಿತಿಗಳನ್ನು ಪಡೆಯಲು ಅನುಕೂಲವಾಗುವುದರೊಂದಿಗೆ ಗುಣಮಟ್ಟದ ಸಂಶೋಧನೆ, ಪ್ರಕಟಣೆಗಳನ್ನು(Publication) ಕೈಗೊಳ್ಳಲು ಸಹಾಯಕಾರಿಯಾಗುತ್ತದೆ ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದ ಹಿನ್ನೆಲೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ AI Lab ನ್ನು ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು. ಮುಂದುವರೆದು, AI ತಂತ್ರಜ್ಞಾನದ ಕುರಿತಾಗಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಅಗತ್ಯ ತರಬೇತಿಯನ್ನು ನೀಡಲು ಸಭೆಯು ಸೂಚಿಸಿತು. |
| 08 | 2025/06/08 | ಪಿಎಚ್.ಡಿ. ವಿದ್ಯಾರ್ಥಿಗಳ ಹಾಜರಾತಿ ಹಾಗೂ ಕಾರ್ಯಾಗಾರಗಳಿಗೆ ಭಾಗವಹಿಸುವುದು ಕಡ್ಡಾಯ ಮತ್ತು ಅವರಿಗೆ Book kit ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಒಟ್ಟು 388 ಪಿಎಚ್.ಡಿ. ವಿದ್ಯಾರ್ಥಿಗಳು(ಪೂರ್ಣ ಕಾಲಿಕ+ಅರೆ ಕಾಲಿಕ) ಅಧ್ಯಯನ ನಡೆಸುತ್ತಿದ್ದು ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿಯಲ್ಲಿ ವರ್ಷಕ್ಕೆ 105 ದಿನಗಳು ಸಂಶೋಧನಾರ್ಥಿಗಳ ಹಾಜರಾತಿ ಕಡ್ಡಾಯವಾಗಿರುತ್ತದೆ. ಆದರೆ, ಕಳೆದ ಒಂದು ವರ್ಷದ ಸಂಶೋಧನಾರ್ಥಿಗಳ ಹಾಜರಾತಿಯನ್ನು ಪರಿಶೀಲಿಸಿದಾಗ ಹಾಜರಾತಿ ಕಡಿಮೆ ಇರುವುದು ಕಂಡು ಬಂದಿದೆ. ಅಲ್ಲದೇ ಇತ್ತೀಚೆಗೆ ಸಂಶೋಧಾನಾರ್ಥಿಗಳಿಗಾಗಿ ತಜ್ಞರನ್ನು ಆಹ್ವಾನಿಸಿ ನಾಲ್ಕು ಕಾರ್ಯಾಗಾರಗಳನ್ನು ನಡೆಸಿದ್ದು ಸದರಿ ಕಾರ್ಯಾಗಾರದಲ್ಲಿ ಬಹಳಷ್ಟು ಸಂಶೋಧನಾರ್ಥಿಗಳು ಗೈರುಹಾಜರಾಗಿರುವುದರಿಂದ ಒಂದು ಕಾರ್ಯಾಗಾರಕ್ಕೆ ರೂ. 5000/-ರಂತೆ ದಂಡ ವಿಧಿಸಲಾಗಿದ್ದು ಒಟ್ಟು ಅಂದಾಜು ರೂ. 16,80,000 ಗಳನ್ನು ಸಂಗ್ರಹಿಸಲಾಗಿರುವ ಮಾಹಿತಿಯನ್ನು ಕುಲಪತಿಗಳು ಸಭೆಗೆ ನೀಡಿದರು.<br>ಚರ್ಚಿಸಿದ ಸಭೆಯು, ಡಾಕ್ಟರೇಟ್ ಅಥವಾ ಪಿಎಚ್.ಡಿ. ಪದವಿಯು ಶೈಕ್ಷಣಿಕ ಪದವಿಗಳಲ್ಲಿಯೇ ಅತ್ಯುನ್ನತ ಪದವಿಯಾಗಿದೆ. ಯಾಕೆಂದರೆ ಇದು ಕೇವಲ ಪುಸ್ತಕಗಳಿಂದ ಓದಿದ್ದನ್ನು ಪರೀಕ್ಷೆ ಬರೆದು ಉತ್ತೀರ್ಣರಾಗುವ ಪದವಿಯಾಗಿರದೆ ತಾನೇ ಸ್ವತಃ ನೆಲೆಯಲ್ಲಿ ಅಧ್ಯಯನ ನಡೆಸಿ ಗುಣಮಟ್ಟದ ಸಂಶೋಧನೆಯನ್ನು ಮಾಡುವ ಪ್ರಕ್ರಿಯೆಯಾಗಿರುವುದರಿಂದ ಪಿಎಚ್.ಡಿ. ವಿದ್ಯಾರ್ಥಿಗಳ ಹಾಜರಾತಿಯನ್ನು ಕಡ್ಡಾಯಗೊಳಿಸಲು ಸಭೆಯು ತೀರ್ಮಾನಿಸಿತು ಹಾಗೂ ವಿಶ್ವವಿದ್ಯಾಲಯವು ಆಯೋಜಿಸುವ ಕಾರ್ಯಾಗಾರಗಳಲ್ಲಿ ಭಾಗವಹಿಸುವುದನ್ನು ಕಡ್ಡಾಯಗೊಳಿಸಲು ಮತ್ತು ಗೈರು ಹಾಜರಾದ ಸಂಶೋಧನಾರ್ಥಿಗಳಿಗೆ ಒಂದು ಕಾರ್ಯಾಗಾರಕ್ಕೆ ರೂ.2500/-ರಂತೆ ದಂಡ ವಿಧಿಸಲು ಸಭೆಯು ಸೂಚಿಸಿತು.<br>ಮುಂದುವರೆದು, ಸಂಶೋಧನಾರ್ಥಿಗಳಿಗೆ Research Methodology ಮತ್ತು ಗುಣಮಟ್ಟದ ಪ್ರಬಂಧ ಮಂಡಿಸಲು ಬುಕ್ ಕಿಟ್ ಅವಶ್ಯಕತೆ ಇರುವುದರಿಂದ ಬುಕ್ ಕಿಟ್ ವಿತರಿಸಲು ಹಾಗೂ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಹಾಜರಾಗುವ ಸಂಶೋಧನಾರ್ಥಿಗಳಿಗೆ ಪ್ರಯಾಣ ಮತ್ತು ದಿನಭತ್ಯೆ ಮಂಜೂರು ಮಾಡಲು ಮತ್ತು ಸ್ಕೂಪ್‌ದಲ್ಲಿ ಆಯ್ಕೆಯಾಗುವ ಸಂಶೋಧನಾ ಪತ್ರಿಕೆಗಳನ್ನು ಪ್ರಕಟಿಸುವ ವೆಚ್ಚಗಳನ್ನು ಈಗಾಗಲೇ ದಂಡದ ರೂಪದಲ್ಲಿ ಸಂಗ್ರಹಿಸಿದ ಮೊತ್ತದಿಂದ ಭರಿಸಲು ಸಭೆಯು ತೀರ್ಮಾನಿಸಿತು. |
| 09 | 2025/06/09 | 2025-26ನೇ ಸಾಲಿನಿಂದ ಎಲ್ಲ ವಿಷಯಗಳ ಪ್ರಥಮದಿಂದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ Work book ಕಡ್ಡಾಯಗೊಳಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗಳಿಗೆ 80:20(Theory:IA) ಮಾದರಿಯ ಅಂಕಗಳನ್ನು ನಿಗದಿಪಡಿಸಲಾಗಿದೆ. ಅದರಲ್ಲಿ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ (Skill development) ಹಾಜರಾತಿ, ಟೆಸ್ಟ್, ಸೆಮಿನಾರ್(Seminar) ಗಳನ್ನು ಸೇರಿಸಿ ಒಟ್ಟು 20 ಆಂತರಿಕ ಅಂಕಗಳನ್ನು ಒಳಗೊಂಡಿದೆ. ಇದರಲ್ಲಿ Work book ಪದ್ಧತಿಯನ್ನು ವಿಶ್ವವಿದ್ಯಾಲಯದ ತರಗತಿಗಳಲ್ಲಿ ಜಾರಿ ಮಾಡುವುದರಿಂದ ವಿದ್ಯಾರ್ಥಿಗಳು ಕಲಿಕೆಯಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಅನುಕೂಲವಾಗುತ್ತದೆ. ಹೆಚ್ಚಿನ ಸಂಖ್ಯೆಯ ಶಿಕ್ಷಕರು ಮತ್ತು |

| | | |
|---|---|---|
| | | ವಿದ್ಯಾರ್ಥಿಗಳು ತರಗತಿಗಳಿಗೆ ಪೂರ್ವ ಸಿದ್ಧತೆ ಇಲ್ಲದೇ ಹಾಜರಾಗುವುದರಿಂದ Work book ನಿಂದಾಗಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಕ್ರಿಯವಾಗಿ ಭಾಗವಹಿಸುತ್ತಾರೆ ಹಾಗೂ ಇದು ಗುಣಾತ್ಮಕ ಶಿಕ್ಷಣಕ್ಕೆ ಸಹಕಾರಿಯಾಗಲಿದೆ ಎಂದು ಮಾನ್ಯ ಕುಲಪತಿಗಳು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸಭೆಯು ಒಪ್ಪಿಗೆ ಸೂಚಿಸಿ 2025-26ನೇ ಸಾಲಿನಿಂದ ಸ್ನಾತಕ ಮತ್ತು ಸ್ನಾತಕೋತ್ತರ ಎಲ್ಲ ವಿಷಯಗಳ ಪ್ರಥಮ ವರ್ಷದಿಂದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ Work book ಕಡ್ಡಾಯಗೊಳಿಸಲು ಅನುಮೋದನೆ ನೀಡಿತು. ಈ ಕುರಿತಾಗಿ ತಗಲುವ ವೆಚ್ಚವನ್ನು ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದಲ್ಲಿ ಭರಿಸಿಕೊಳ್ಳಲು ಸೂಚಿಸಿತು.<br>ಮುಂದುವರೆದು, Work book ನಿರ್ವಹಣೆ ಕುರಿತಾಗಿ ಪ್ರತಿ ವಿಭಾಗಗಳ ಸ್ನಾತಕ ಮತ್ತು ಸ್ನಾತಕೋತ್ತರ ಅಭ್ಯಾಸ ಮಂಡಳಿ(BoS) ರೂಪ-ರೇಷೆಗಳನ್ನು ತಯಾರಿಸಲು ಸಭೆಯು ಸೂಚಿಸಿತು ಹಾಗೂ ಅಗತ್ಯವಿದ್ದಲ್ಲಿ ವಿಶ್ವವಿದ್ಯಾಲಯದಿಂದ ಕಾರ್ಯಾಗಾರವನ್ನು ನಡೆಸಿ ತಜ್ಞರನ್ನು ಆಹ್ವಾನಿಸಿ ಅವರಿಂದ ಸೂಕ್ತ ಮಾರ್ಗದರ್ಶನ ಪಡೆಯಲು ಸಭೆಯು ತಿಳಿಸಿತು ಹಾಗೂ ಒಟ್ಟು 20 ಆಂತರಿಕ ಅಂಕಗಳಲ್ಲಿ ಎರಡು ಟೆಸ್ಟ್-10 ಅಂಕ, Work book/Activities-10 ಅಂಕಗಳನ್ನು ನಿಗದಿಪಡಿಸಿ ಸಂಬಂಧಿಸಿದವರಿಗೆ ಸುತ್ತೋಲೆ ಹೊರಡಿಸಿ ಮಾಹಿತಿಯನ್ನು ನೀಡಲು ಸಭೆಯು ತೀರ್ಮಾನಿಸಿತು. |
| 10 | 2025/06/10 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಠ್ಯಗಳನ್ನು ರಚಿಸಲು BoS ಪರಿಣಿತರ ತಂಡವನ್ನು ರಚಿಸುವ ಕುರಿತು. |
| ತೀರ್ಮಾನ | | ಪಠ್ಯಕ್ರಮವು ಶೈಕ್ಷಣಿಕ ಕಾರ್ಯಕ್ರಮದ ಪ್ರಮುಖ ಭಾಗವಾಗಿದ್ದು, ದೇಶದ ಪ್ರತಿಷ್ಠಿತ ಸಂಸ್ಥೆಗಳಾದ IIT, IIM, ಹಾಗೂ ಬೇರೆ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು, ನಿವೃತ್ತ ನ್ಯಾಯಾಧೀಶರು, ಐ.ಎ.ಎಸ್. ಅಧಿಕಾರಿಗಳನ್ನು ಮತ್ತು ಇನ್ನಿತರ ಕ್ಷೇತ್ರದ ಗಣ್ಯರುಗಳನ್ನು ಆಹ್ವಾನಿಸಿ ಪಠ್ಯಕ್ರಮಗಳನ್ನು ರಚಿಸಲು ಸಲಹೆ-ಸೂಚನೆಗಳನ್ನು ಪಡೆಯುವ ಕುರಿತಂತೆ ವಿಭಾಗವಾರು ಬಿ.ಓ.ಎಸ್. ಪರಿಣಿತರ ತಂಡವನ್ನು ರಚಿಸಲು ಸಭೆಯು ಅನುಮೋದನೆ ನೀಡಿತು. |
| 11 | 2025/06/11 | ಸ್ನಾತಕ ವಿಭಾಗಗಳ NEP ಪಠ್ಯಕ್ರಮದಿಂದ ನೂತನ ಪಠ್ಯಕ್ರಮಕ್ಕೆ ಮರುಪ್ರವೇಶಾತಿ ಪ್ರಕ್ರಿಯೆ ಕುರಿತು. |
| ತೀರ್ಮಾನ | | ವಿಶೇಷಾಧಿಕಾರಿಗಳಾದ ಪ್ರೊ. ಬಿ. ಎಸ್. ನಾವಿ ಇವರು ಮಾತನಾಡಿ, NEP ಯ ಕೆಲವು ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುತ್ತಾರೆ. ಹೀಗೆ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸ್ನಾತಕ 3 ಮತ್ತು 5 ನೇ ಸೆಮಿಸ್ಟರ್ ಗೆ ಅವಕಾಶ ನೀಡಲು ನಿಯಮಾವಳಿಗಳನ್ನು ರಚಿಸಲಾಗಿದೆ. ಸದರಿ ನಿಯಮಾವಳಿಗಳಲ್ಲಿ NEP ಯಿಂದ SEP ಗೆ ಪ್ರವೇಶಾತಿ, ಪರೀಕ್ಷಾ ಫಲಿತಾಂಶ, ರ್‍ಯಾಂಕ್ ಇನ್ನಿತರ ವಿಷಯಗಳ ಮಾನದಂಡಗಳನ್ನು ರೂಪಿಸಲಾಗಿದೆ ಎಂದು ನೂತನ ಪಠ್ಯಕ್ರಮದ ಕುರಿತು ಸಭೆಗೆ ಮಾಹಿತಿ ನೀಡಿದರು. ಪರಿಶೀಲಿಸಿದ ಸಭೆಯು ಸ್ನಾತಕ ವಿಭಾಗಗಳ NEP ಪಠ್ಯಕ್ರಮದಿಂದ ನೂತನ ಪಠ್ಯಕ್ರಮಕ್ಕೆ ಮರುಪ್ರವೇಶಾತಿ ಪ್ರಕ್ರಿಯೆ ನಿಯಮಾವಳಿಗಳಿಗೆ ಅನುಮೋದನೆ ನೀಡಿತು. |
| 12 | 2025/06/12 | ಸ್ನಾತಕ ಕೋರ್ಸ್‌ಗಳ ಪ್ರವೇಶ ಶುಲ್ಕದ ಜೊತೆಗೆ ಪರೀಕ್ಷಾ ಶುಲ್ಕವನ್ನು ಭರಿಸಿಕೊಳ್ಳುವ ಕುರಿತು |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಪ್ರಾರಂಭದಲ್ಲಿ ಪ್ರವೇಶ ಶುಲ್ಕವನ್ನು ಭರಿಸಿಕೊಳ್ಳಲಾಗುತ್ತದೆ. ನಂತರ ಪರೀಕ್ಷಾ ಶುಲ್ಕವನ್ನು ತೆಗೆದುಕೊಳ್ಳುತ್ತದೆ. ಮುಂದಿನ ಶೈಕ್ಷಣಿಕ ವರ್ಷದಿಂದ 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕ ವಿವಿಧ ಕೋರ್ಸುಗಳ ಪ್ರವೇಶ ಶುಲ್ಕದ ಜೊತೆಗೆ ಪರೀಕ್ಷಾ ಶುಲ್ಕ ಭರಿಸಿಕೊಳ್ಳಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಮುಂದುವರೆದು, ವಿದ್ಯಾರ್ಥಿಗಳು 75% ರಷ್ಟು ಹಾಜರಾತಿ ಪೂರ್ಣಗೊಂಡಲ್ಲಿ ಮಾತ್ರ ಪರೀಕ್ಷೆಗೆ ಅರ್ಹರಾಗುವುದರಿಂದ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಪರೀಕ್ಷಾ ಶುಲ್ಕವನ್ನು ಭರಿಸಿಕೊಳ್ಳುವುದು ಸೂಕ್ತವಲ್ಲ ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಯಿತು. |
| 13 | 2025/06/13 | ಮಹಿಳಾ ಅಧ್ಯಯನ ವಿಷಯವನ್ನು ವಿಶ್ವವಿದ್ಯಾಲಯಗಳಲ್ಲಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾರಂಭಿಸುವಂತೆ ಹಾಗೂ UUCMS ತಂತ್ರಾಂಶದಲ್ಲಿ ಅಳವಡಿಸುವ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರದಿಂದ ಬಂದು ಪತ್ರ ಕುರಿತು. |
| ತೀರ್ಮಾನ | | ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಇವರು ಮಹಿಳಾ ಅಧ್ಯಯನ ವಿಷಯವನ್ನು ವಿಶ್ವವಿದ್ಯಾಲಯಗಳಲ್ಲಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾರಂಭಿಸಲು ಹಾಗೂ UUCMS ತಂತ್ರಾಂಶದಲ್ಲಿ ಅಳವಡಿಸುವಂತೆ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿರುತ್ತಾರೆ. ಪರಿಶೀಲಿಸಿದ ಸಭೆಯು, ವಿಶ್ವವಿದ್ಯಾಲಯಗಳಲ್ಲಿ ಮತ್ತು ಸರ್ಕಾರಿ |

<table>
<tr><td></td><td></td><td>ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಹಿಳಾ ಅಧ್ಯಯನ ವಿಷಯವನ್ನು ಪ್ರಾರಂಭಿಸುವಂತೆ ಹಾಗೂ UUCMS ತಂತ್ರಾಂಶದಲ್ಲಿ ಅಳವಡಿಸುವ ವಿಷಯವನ್ನು ಸುತ್ತೋಲೆ ಹೊರಡಿಸಿ ಮಹಾವಿದ್ಯಾಲಯದವರಿಗೆ ಮಾಹಿತಿ ನೀಡಲು ಸಭೆಯು ತೀರ್ಮಾನಿಸಿತು.</td></tr>
<tr><td>14</td><td>2025/06/14</td><td>ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳ Staff Approval ಅನುಮೋದನೆಗಾಗಿ ಶುಲ್ಕ ನಿಗದಿಪಡಿಸುವ ಕುರಿತು.</td></tr>
<tr><td colspan="2">ತೀರ್ಮಾನ</td><td>ಸ್ನಾತಕ/ಸ್ನಾತಕೋತ್ತರ(UG/PG) ಸಂಯೋಜಿತ ಮಹಾವಿದ್ಯಾಯಗಳ ಸಿಬ್ಬಂದಿಗಳ ಅಂಕಪಟ್ಟಿಗಳ ಪರಿಶೀಲನೆ ಹಾಗೂ ಅರ್ಹತೆ ಮಾನದಂಡಗಳನ್ನು ನಡೆಸುವ ಜವಾಬ್ದಾರಿ ಪರಿಣಿತಿಯನ್ನು ಪರಿಶೀಲನೆಗೊಳಿಸಿ, ವಿಶ್ವವಿದ್ಯಾಲಯದಿಂದ Staff Approval ನ್ನು ಅನುಮೋದಿಸಲು ಪ್ರತಿ ಮಹಾವಿದ್ಯಾಲಯಗಳ ಪ್ರತಿ ಬೋಧಕ ಸಿಬ್ಬಂದಿಗೆ ರೂ. **500**(Within Karnataka) ಹಾಗೂ ರೂ.**1000** (Outside Karnataka) ನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿತು.</td></tr>
<tr><td>15</td><td>2025/06/15</td><td>School of Criminology and Criminal Justice ಅಡಿಯಲ್ಲಿ 2021-22ನೇ ಸಾಲಿನಿಂದ M.Sc Criminology and Forensic Science ನ್ನು ಪ್ರಾರಂಭಿಸಿರುವುದನ್ನು ಸ್ನಾತಕೋತ್ತರ ಕೋರ್ಸಗಳ ನಿಯಮಾವಳಿಗಳಲ್ಲಿ ಸೇರ್ಪಡೆಗೊಳಿಸಿ ಉನ್ನತ ಶಿಕ್ಷಣ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಲು ಅನುಮೋದನೆ ಕುರಿತು.</td></tr>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಪರಾಧಶಾಸ್ತ್ರ ವಿಭಾಗವು School of Criminology and Criminal Justice ಅಡಿಯಲ್ಲಿ **2021-22** ನೇ ಸಾಲಿನಿಂದ M.Sc Criminology and Forensic Science ನ್ನು ದಿನಾಂಕ: **23.03.2021** ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗಳ ಅನುಮೋದನೆ ಪಡೆದುಕೊಂಡು ಪ್ರಾರಂಭಿಸಲಾಗಿದೆ. ಸದರಿ ಮಾಹಿತಿಯನ್ನು **2020-21**ನೇ ಸಾಲಿನ ಸ್ನಾತಕೋತ್ತರ ನಿಯಮಾವಳಿಗಳಲ್ಲಿ ಈ ಕೆಳಗಿನಂತೆ ಸೇರ್ಪಡೆಗೊಳಿಸಿ, ಉನ್ನತ ಶಿಕ್ಷಣ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.
<table>
<tr><td colspan="3">SL No. PROGRAMES:</td></tr>
<tr><td>05</td><td>School of Criminology and Criminal Justice</td><td>• MA/M.Sc Criminology and Criminal Justice<br>• M.Sc Criminology and Forensic Science</td></tr>
<tr><td>02</td><td>School of Basic Sciences</td><td>• M.Sc in Alcohol Technology<br>• M.Sc in Sugar Technology</td></tr>
<tr><td></td><td colspan="2">• Revised CGPA/SGPA details.</td></tr>
<tr><td></td><td colspan="2">• Addition of Criminology and Criminal Justice Course structure.</td></tr>
<tr><td></td><td colspan="2">• Addition of Separate MBA & M.Com Course Structures</td></tr>
<tr><td></td><td colspan="2">• Addition of M.Sc in Alcohol Technology Course Structure.</td></tr>
<tr><td></td><td colspan="2">• Addition of M.Sc. Sugar Technology Course Structure.</td></tr>
</table></td></tr>
<tr><td>16</td><td>2025/06/16</td><td>2025-26ನೇ ಸಾಲಿನಿಂದ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪ್ರವೇಶಾತಿಗೆ ಪ್ರವೇಶ ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯುವ ಕುರಿತು.</td></tr>
<tr><td colspan="2">ತೀರ್ಮಾನ</td><td>ವಿದ್ಯಾರ್ಥಿಗಳ ಜ್ಞಾನ ಮತ್ತು ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲು ಹಾಗೂ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಲು **2025-26**ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ನೀಡಲು ಅರ್ಹತಾ ಪರೀಕ್ಷೆಯನ್ನು ಜರುಗಿಸುವ ಕುರಿತು ಮಾನ್ಯ ಕುಲಪತಿಗಳು ಪ್ರಸ್ತಾಪಿಸಿದರು. ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಹಾಗೂ ಅವರ ವೃತ್ತಿ ಜೀವನ ರೂಪಿಸಲು ಪ್ರವೇಶ ಪರೀಕ್ಷೆಗಳು ಮಹತ್ವದ ಪಾತ್ರ ವಹಿಸುತ್ತದೆ ಕಾರಣ ಸಭೆಯು ಒಪ್ಪಿಗೆ ಸೂಚಿಸಿ, **100** ಅಂಕಗಳ ಸಾಮಾನ್ಯ ಪರೀಕ್ಷೆ ನಡೆಸಲು ಸಭೆಯು ತೀರ್ಮಾನಿಸಿತು. ಇದರಲ್ಲಿ ಸಾಮಾನ್ಯ ಜ್ಞಾನ-5, ಗಣಿತ-5, ಪ್ರಚಲಿತ ವಿದ್ಯಮಾನಗಳು-5 ಭಾಷೆ-5, ಕಂಪ್ಯೂಟರ್-5 ಒಟ್ಟು **25** ಅಂಕಗಳು ಮತ್ತು ಇನ್ನುಳಿದ **75** ಅಂಕಗಳು ವಿಷಯಾಧಾರಿತ ಪ್ರಶ್ನೆಗಳನ್ನು ಸಂಬಂಧಿಸಿದ ವಿಭಾಗದ ಮುಖ್ಯಸ್ಥರು ರಚಿಸಲು ಸಭೆಯು ತೀರ್ಮಾನಿಸಿತು.</td></tr>
<tr><td>17</td><td>2025/06/17</td><td>ಸ್ನಾತಕ ವಾಣಿಜ್ಯ ವಿಭಾಗದ ಪಠ್ಯಕ್ರಮದಲ್ಲಿ ಅರ್ಥಶಾಸ್ತ್ರದ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 14.05.2025 ರ ಸಭೆಯ ನಿರ್ಣಯದ ಕುರಿತು.</td></tr>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ನಾತಕ ವಾಣಿಜ್ಯ ವಿಷಯದ ಪಠ್ಯಕ್ರಮದಲ್ಲಿ ಅರ್ಥಶಾಸ್ತ್ರ ವಿಷಯವನ್ನು ಅಳವಡಿಸುವ ಕುರಿತಾಗಿ ತೀರ್ಮಾನಿಸಲು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ: **14.05.2025** ರಂದು ಸಭೆ ನಡೆಸಿ, ಸದರಿ ಸಭೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ ಪ್ರೊ. ಎಸ್. ಆರ್. ನಿರಂಜನ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ಈ ವಿಷಯವಾಗಿ ಉನ್ನತ</td></tr>
</table>

| | | |
|---|---|---|
| | | ಶಿಕ್ಷಣ ಪರಿಷತ್ತಿನಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುವುದಾಗಿ ತಿಳಿಸಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು ಹಾಗೂ ಸಮಿತಿ ವರದಿಯನ್ನು ಮಂಡಿಸಲಾಯಿತು.<br>ವರದಿಯನ್ನು ಪರಿಶೀಲಿಸಿದ ಸಭೆಯು ಸರ್ಕಾರದ ಸೂಕ್ತ ನಿರ್ದೇಶನ ಬರುವವರೆಗೆ ಮುಂದಿನ ಆದೇಶದವರೆಗೆ ಸ್ನಾತಕ ವಾಣಿಜ್ಯ ವಿಭಾಗದ ಪಠ್ಯಕ್ರಮದಲ್ಲಿ ಅರ್ಥಶಾಸ್ತ್ರದ ವಿಷಯಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ತೀರ್ಮಾನಿಸಲಾಯಿತು.<br>ಮುಂದುವರೆದು, ಈ ವಿಷಯಕ್ಕೆ ಸಂಬಂಧಿಸಿದಂತೆ ವಾಣಿಜ್ಯಶಾಸ್ತ್ರ ವಿಷಯದ ಅಧ್ಯಾಪಕರು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುವುದನ್ನು ಸ್ಥಗಿತಗೊಳಿಸಿರುವ ವಿಷಯವನ್ನು ಕುಲಸಚಿವರು(ಮೌ) ಸಭೆಯ ಗಮನಕ್ಕೆ ತಂದರು. ವಾಣಿಜ್ಯಶಾಸ್ತ್ರ ವಿಭಾಗದ ಡೀನರಾದ ಪ್ರೊ. ಎಸ್. ಬಿ. ಆಕಾಶ ಇವರು ವಾಣಿಜ್ಯಶಾಸ್ತ್ರ ವಿಷಯದ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಅಧ್ಯಾಪಕರುಗಳು ಶೀಘ್ರವಾಗಿ ಕೈಗೊಳ್ಳುವಂತೆ ಮುತುವರ್ಜಿ ವಹಿಸಲು ಸಭೆಯು ಸೂಚಿಸಿತು. |
| 18 | 2025/06/18 | 2025-26 ನೇ ಸಾಲಿನ ಮೊದಲನೆ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು. |
| ತೀರ್ಮಾನ | | ದಿನಾಂಕ: **30.05.2025** ರಂದು ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇಲ್ಲಿ ಜರುಗಿದ **2025-26** ನೇ ಸಾಲಿನ ಮೊದಲನೆ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು** | | |
| 19 | 2025/06/I | ಸ್ನಾತಕ ವಿಭಾಗಗಳ ರಾಷ್ಟ್ರೀಯ ಶಿಕ್ಷಣ ನೀತಿ-2020 ಪಠ್ಯಕ್ರಮದ ಪರಿಷ್ಕೃತ ವಿನಿಯಮವನ್ನು(Regulations) ಅನುಮೋದಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ವಿಭಾಗಗಳ ರಾಷ್ಟ್ರೀಯ ಶಿಕ್ಷಣ ನೀಡಿ-2020 ಪಠ್ಯಕ್ರಮದ ಪರಿಷ್ಕೃತ ವಿನಿಯಮವನ್ನು(Regulations) ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| 20 | 2025/06/II | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ RCU-FESMA(Foundation for Entrepreneurship, Skiling and Management Academia) A Section 8 Company ನ್ನು ಸ್ಥಾಪಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ RCU-FESMA(Foundation for Entrepreneurship, Skiling and Management Academia) A Section 8 Company ನ್ನು ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು. |
| 21 | 2025/06/III | APD, ಬೆಂಗಳೂರು ಇವರು, ವಿಕಲಚೇತನ ವ್ಯಕ್ತಿಗಳ ಪುನರ್ವಸತಿಗಾಗಿ ಸಮುದಾಯ ಅಭಿವೃದ್ಧಿ ಕೇಂದ್ರ(Community Development Centre) ಕಟ್ಟಿಸಿ ಕೊಡಲು ಹಿರೇಬಾಗೇವಾಡಿಯ ನೂತನ ಕಟ್ಟಡದಲ್ಲಿ 5 ಎಕರೆ ಜಮೀನನ್ನು ಕಾಯ್ದಿರಿಸುವ ಕುರಿತು. |
| ತೀರ್ಮಾನ | | ಸಮಾಜಕಾರ್ಯ ವಿಭಾಗದವರ ಸಹಯೋಗದೊಂದಿಗೆ ವಿಕಲಚೇತನ ವ್ಯಕ್ತಿಗಳ ಪುನರ್ವಸತಿಗಾಗಿ ಸಮುದಾಯ ಅಭಿವೃದ್ಧಿ ಕೇಂದ್ರ(Community Development Centre) ಕಟ್ಟಿಸಿ ಕೊಡಲು Association for people with Disability (APD) ಬೆಂಗಳೂರು ಇವರು ಆಸಕ್ತಿ ತೋರಿಸಿರುತ್ತಾರೆ. ಸದರಿ ಕಾರ್ಯಯೋಜನೆಗೆ ಹಿರೇಬಾಗೇವಾಡಿಯ ನೂತನ ಕಟ್ಟಡದಲ್ಲಿ 5 ಎಕರೆ ಜಮೀನನ್ನು ಕಾಯ್ದಿರಿಸಲು ಸಭೆಯು ಅನುಮೋದನೆ ನೀಡಿತು. |
| 22 | 2025/06/IV | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ Intellectual Property Rights"(IPR) Policy ಕುರಿತು ನಿಯಮಾವಳಿಗಳನ್ನು ರಚಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ Intellectual Property Rights"(IPR) Policy ರಚಿಸಲು IPR Policy ಸಮಿತಿಯು ಸಲ್ಲಿಸಿದ ನಿಯಮಾವಳಿಗಳಿಗೆ ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| 23 | 2025/06/V | Indian Air Force and Friendly Foreign Country(FFC) Trainees ಗಳಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವತಿಯಿಂದ ಯೋಗಾ ತರಬೇತಿ ನೀಡಲು ನೂತನ ಪಠ್ಯಕ್ರಮವನ್ನು ರಚಿಸುವ ಕುರಿತು. |

<table>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವತಿಯಿಂದ, Air Force's Air Force School of Physical Fitness (AFSPF) ಹಾಗೂ ಹೊರ ದೇಶದಿಂದ ಆಗಮಿಸುವ ಟ್ರೇನಿಗಳಿಗೆ ವಾಯುಸೇನೆ, ಬೆಳಗಾವಿ ಕೇಂದ್ರದಲ್ಲಿ ತರಬೇತಿ ನೀಡುವುದರ ಕುರಿತು ಪಠ್ಯಕ್ರಮ ರಚಿಸಲು ಸಭೆಯು ಅನುಮೋದನೆ ನೀಡಿತು.</td></tr>
<tr><td>24</td><td>2025/06/VI</td><td>2025-26ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಕೋರ್ಸಗಳ ಆರಂಭಕ್ಕೆ ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಕಲಾ ಮಹಾವಿದ್ಯಾಲಯ(ಸ್ವಾಯತ್ತ)ದಿಂದ ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆ ಕುರಿತು</td></tr>
<tr><td colspan="2">ತೀರ್ಮಾನ</td><td>2025-26 ನೇ ಶೈಕ್ಷಣಿಕ ಸಾಲಿನಿಂದ ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಕಲಾ ಮಹಾವಿದ್ಯಾಲಯ(ಸ್ವಾಯತ್ತ)ದಿಂದ ಹೊಸ ಕೋರ್ಸಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಿರುವರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 59 ರ ಉಪಪ್ರಕರಣ 6(2) ರನ್ವಯ, ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಸಲ್ಲಿಸಿದ ವರದಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು. ವರದಿಯನ್ನು ಪರಿಶೀಲಿಸಿದ ಸಮಿತಿಯು ಈ ಕೆಳಕಾಣಿಸಿದಂತೆ ಪ್ರವೇಶಾತಿ ಮಿತಿಯನ್ನು ಮಂಜೂರು ಮಾಡಲು ಸಭೆಯು ತೀರ್ಮಾನಿಸಲಾಯಿತು.
<table>
<tr><th>ಸಂ</th><th>ಕೋರ್ಸ</th><th>ಪ್ರವೇಶ ಮಿತಿ</th></tr>
<tr><td>1</td><td>Bachelor of Fashion and Apparel Design</td><td>ಇಲ್ಲ</td></tr>
<tr><td>2</td><td>Bachelor of Computer Application</td><td>60</td></tr>
<tr><td>3</td><td>Master of Business Admission</td><td>60</td></tr>
</table></td></tr>
<tr><td>25</td><td>2025/06/VII</td><td>2025-26 ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ(ಸ್ವಾಯತ್ತ)ದಿಂದ ಹೊಸ ಕೋರ್ಸನ ಆರಂಭದ ಅನುಮೋದನೆಗೆ ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆ ಕುರಿತು</td></tr>
<tr><td colspan="2">ತೀರ್ಮಾನ</td><td>2025-26 ನೇ ಶೈಕ್ಷಣಿಕ ಸಾಲಿನಿಂದ ಕೆ.ಎಲ್.ಇ. ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ(ಸ್ವಾಯತ್ತ)ದಿಂದ ಹೊಸ ಕೋರ್ಸನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಿರುವರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 59 ರ ಉಪಪ್ರಕರಣ 6(2) ರನ್ವಯ, ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಸಲ್ಲಿಸಿದ ವರದಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು. ವರದಿಯನ್ನು ಪರಿಶೀಲಿಸಿದ ಸಮಿತಿಯು ಈ ಕೆಳಕಾಣಿಸಿದಂತೆ ಪ್ರವೇಶಾತಿ ಮಿತಿಯನ್ನು ಮಂಜೂರು ಮಾಡಲು ಸಭೆಯು ತೀರ್ಮಾನಿಸಲಾಯಿತು.
<table>
<tr><th>ಸಂ</th><th>ಕೋರ್ಸ</th><th>ಪ್ರವೇಶ ಮಿತಿ</th></tr>
<tr><td>1</td><td>Master of Computer Application</td><td>40</td></tr>
</table></td></tr>
<tr><td>26</td><td>2025/06/VIII</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿನ ಎಲ್ಲ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು ಬೋಧಿಸುತ್ತಿರುವ ವಿಷಯಗಳನ್ನು Video Record ಮಾಡಿ E-vidya App ನಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ. ಅದೇ ರೀತಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸ್ವಾಯತ್ತ ಮಹಾವಿದ್ಯಾಲಯಗಳ(Autonomous College) ಸ್ನಾತಕೋತ್ತರ ವಿಭಾಗಗಳಲ್ಲಿ ಬೋಧನೆ ಮಾಡುತ್ತಿರುವ ಅಧ್ಯಾಪಕರುಗಳು ತಮ್ಮ ಬೋಧನಾ ವಿಷಯಗಳನ್ನು Video Record ಮಾಡಿ ಕಡ್ಡಾಯವಾಗಿ ವಿಶ್ವವಿದ್ಯಾಲಯದ E-vidya App ನಲ್ಲಿ ಅಪ್‌ಲೋಡ್ ಮಾಡುವಂತೆ ಸೂಚಿಸಲು ಸಭೆಯು ತೀರ್ಮಾನಿಸಿತು.</td></tr>
<tr><td>27</td><td>2025/06/IX</td><td>ವಿಶ್ವವಿದ್ಯಾಲಯದ ಸ್ನಾತಕ ಕೋರ್ಸಗಳ 2, 4 ಹಾಗೂ 6ನೇ ಸೆಮೆಸ್ಟರ್ ಪರೀಕ್ಷೆಯಲ್ಲಿ ಬಿ.ಕಾಂ. ಕೋರ್ಸನ ಪ್ರಶ್ನೆಪತ್ರಿಕೆಗಳಲ್ಲಿನ ಸಿದ್ಧತೆ/ ಅಂತಿಮಗೊಳಿಸುವಲ್ಲಿ ಬೇಜವಾಬ್ದಾರಿ ತೋರಿಸುವಿಕೆ ಹಾಗೂ ಪರೀಕ್ಷಾ ಗೌಪ್ಯತೆ ನಿಯಮಗಳನ್ನು ಉಲ್ಲಂಘಿಸುವಿಕೆಗಳು ಗಂಭೀರ ಲೋಪಗಳಾಗಿರುವುದರಿಂದ ಶಿಸ್ತುಕ್ರಮ/ದಂಡದ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಲು ವಿದ್ಯಾವಿಷಯಕ್ ಪರಿಷತ್ತಿನ ಸಭೆಯು ಶಿಫಾರಸ್ಸು ಮಾಡಿತು.</td></tr>
</table>

ಕೊನೆಯದಾಗಿ, ಧನ್ಯವಾದಗಳನ್ನು ತಿಳಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** **ಕುಲಪತಿಗಳು ಹಾಗೂ ಅಧ್ಯಕ್ಷರು**

**ಇವರಿಗೆ,**

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸದಸ್ಯರುಗಳಿಗೆ,**

ಪ್ರತಿ ಮಾಹಿತಿಗಾಗಿ: ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.